ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಕೆಲವು ಸಂದರ್ಭಗಳಲ್ಲಿ ರೈತರು ದೇಶದ ಸಂಪತ್ತನ್ನು ಬೆಳೆಯುತ್ತಾರೆಂದು ಅವರಿಗೆ ಅವಕಾಶ ಮಾಡಿಕೊಟ್ಟಿದ್ದು ಉಂಟು. ಹೆಚ್ಚಿಗೆ ಬೆಳದಷ್ಟೂ ದೇಶಕ್ಕೆ ಲಾಭವಾಗುತ್ತದೆಂದು ರಿಯಾಯಿತಿ ನೀಡಿದ್ದು ಉಂಟು. ಆದರೂ ಕೂಡ ಅನ್‌ಆಥರೈಸ್ಡ್ ಆಗಿ ಏನು ಬೆಳೆಯುತ್ತಿದ್ದಾರೆ ಅವರ ಮೇಲೆ ಕರ ಹಾಕಿ ಸರ್ಕಾರಕ್ಕೆ ಸಂದಾಯವಾಗಬೇಕಾದ ಹಣವನ್ನು ವಸೂಲ್ಮಾಡಲೇ ಬೇಕಾಗುತ್ತದೆ. ಅವರ ಮೇಲೆ ಪಾಟ್ರ್ ರೇಟ್ ಹಾಕಿ ಅದನ್ನು ವಸೂಲ್ಮಾಡುವುದಕ್ಕೆ ನಾವು ಸೂಕ್ತ ಕ್ರಮತೆಗೆದುಕೊಳ್ಳುತ್ತೇವೆ.

Short Notice Question and Answer

Denudation of Tank Bund in Ankola Taluk, Uttara Kannada District.

20 SMT. ANUSUYA GAJANANA SHARMA (Ankola) —Will the Minister for Transport and Minor Irrigation be pleased to state.—

(a) whether it has come to the notice of Government that hundreds of acres of fer ile land, coc nut trees and backyard of houses have already been destroyed by denudation due to continuous breach of river on the bank of Gangavali river near Hadava Village in Ankola taluk, Uttara Kannada District;

(b) whether it has come to the notice of the Government that many ryots and poor people are migrating to other places due to this havoc;

(c) the measures taken by the Government i . this behalf?

SRI M. M. J. SADYOJATHA (Minister for Transport and Minor Irrigation).—

(a) Yes.

(b) No.

(c) It is likely that the lands of Hadava and Hitchkada Villages which are on the right bank of Gangavali river and also the lands adjacent to these villages are likely to be affected by soil erosion due to sea waves. The fertility o; the land would be lost due to this havoc of mixing up of salt water. Some remedy has to be found out to this problem. it is proposed to construct a protective embankment at Gajani lands along side the Gangavali river to protect from soil erosion. A Project report was prepared for construction of 1610 meter long embankment at an estimated cost of Rs. 2,50,000 (at the Divisional Schedule Rates of 1980-81) covering the Gangavali River Bank at Hadava and Hitchkada villages t› protert about an area of 104 acres. Besides, an estimate for Rs. 13.11,000 has now been prepared for construction of 1920 meter long embankment. keeping in view the hardships of the local ryots. By this about 296 acres of land would be protected from the havoc of salt water. The questlon

of according approval to the said estimate is under consideration of Government.

ಶ್ರೀಮತಿ ಅನಸೂಯ ಗಜಾನನ ಶರ್ಮ.—ನಾನು ಹಿಂದೆ ನದಿ ಕೊರೆತದಿಂದ ಭೂಮಿ ಹಾಳಾಗಿ ಹೋಗುವುದರ ಬಗ್ಗೆ ಪ್ರಶ್ನೆ ಹಾಕಿದಾಗ ಹಿಂದಿನ ಮಾನ್ಯ ಲೋಕೋಪಯೋಗಿ ಸಚಿವರಾದ ಬಂಗಾರಪ್ಪನವರು ಅದಕ್ಕೆ ಶಾಶ್ವತ ಪರಿಹಾರ ಮಾಡಿಸಿಕೊಡುತ್ತೇವೆಂದು ಹೇಳಿದ್ದರು. ಈ ಪ್ರಶ್ನೆಗೆ ಈಗ ಮಾನ್ಯ ನೀರಾವರಿ ಸಚಿವರು ಉತ್ತರಿಸುತ್ತಿದ್ದಾರೆ. ಆದ್ದರಿಂದ, ಇದು ಯಾವ ಖಾತೆಗೆ ಸೇರಿದ ಕೆಲಸ ಎಂಬುದು ಗೊತ್ತಿಲ್ಲದೆ ಈ ರೀತಿ ಆಗುತ್ತಿದೆಯೇ ಹೇಗೆ ? ಇದು ನದಿ ಕೊರೆತವೇ ಹೊರತು ಸಮುದ್ರದ ಕೊರೆತ ಅಲ್ಲ ಈ ಅನಾಹುತದಿಂದ ಎಷ್ಟೋ ಬಡಜನರು, ರೈತರು ಬಲಸೆ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದರೆ ಇಲ್ಲವೆಂದು ಹೇಳಿದ್ದಾರೆ. ಈ ಸದನದಲ್ಲಿ ಈ ಬಗ್ಗೆ ೩ ಪ್ರಶ್ನೆ ಹಾಕಿದ್ದೇನೆ. ನಂತರ ಅಂಕೋಲದ ತಹಶೀಲ್ದಾರರ ಕಛೇರಿ ಮುಂದೆ ರೈತರ ಜೊತೆ ಕಂಳಿತು ಸತ್ಯಾಗ್ರಹ ಮಾಡಿದ್ದೇನೆ, ಮತ್ತು ಸರ್ಕಾರಕ್ಕೆ ಮನವಿ ಕೂಡ ಕಳುಹಿಸಿದ್ದೇನೆ. ಆದರೆ ಇವರು ಇಲ್ಲವೆಂದು ಹೇಳಿದ್ದಾರೆ. ೧೦೪ ಎಕರೆ ಪ್ರದೇಶವನ್ನು ರಕ್ಷಿಸಲು ೧೬೧೦ ಮೀಟರ್ ಉದ್ದದ ಕಟ್ಟೆಯನ್ನು ಗಂಗಾವಳಿ ನದಿಯ ಬದಿಗೆ ಕಟ್ಟಲು ೮೦- ೮೧ರಲ್ಲಿ ೨ ಲಕ್ಷದ ೫೦ ಸಾವಿರ ರೂಪಾಯಿಗಳ ಯೋಜನೆಯನ್ನು ತಯಾರಿಸಲಾಗಿತ್ತು ಎಂದು ಹೇಳಿದ್ದಾರೆ. ಆದರೆ ಅದು ಮುಂದೆ ಏನಾಯಿತೆಂಬುದನ್ನು ಹೇಳಲಿಲ್ಲ. ಇದೇ ರೀತಿ ಸ್ಥಳೀಯ ರೈತರ ೨೯೬ ಎಕರೆ ಜಮೀನನ್ನು ಉಪ್ಪುನೀರಿನಿಂದ ರಕ್ಷಿಸುವ ಸಲುವಾಗಿ ೧೯೨೦ ಮೀಟರ್ ಉದ್ದದ ಕಟ್ಟೆಯನ್ನು ಕಟ್ಟಲು ೧೩ ಲಕ್ಷದ ೧೦ ಸಾವಿರ ರೂಪಾಯಿಗಳ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ. ಹೀಗಾಗಿ ಇವತ್ತಿನ ದಿವಸ ಆ ಬಡ ರೈತರು ತಮ್ಮ ಜಮೀನು, ಮನೆಯನ್ನು ಕಳೆದುಕೊಂಡು ಊರು ಬಿಟ್ಟು ಹೋಗುತ್ತಿದ್ದಾರೆ. ಸರ್ಕಾರ ಇದನ್ನೆಲ್ಲ ನೋಡಿ ಪರಿಶೀಲನೆ ಮಾಡದೆ ಕಂಳಿತರೆ ಹೇಗೆ? ಈಗಲಾದರೂ ೧೯೮೨-೮೩ರ ಬಡ್ಜೆಟ್ಟಿನಲ್ಲಿ ಅದಕ್ಕೆ ಪ್ರಾವಿಷನ್ ಮಾಡಿ ಕಟ್ಟೆ ಕಟ್ಟಿಸಿ ಕೊಡುತ್ತೇವೆಂದು ಹೇಳುತ್ತೀರಾ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಮೊದಲು ೧೬೧೧ ಮೀಟರ್ ಉದ್ದದ ಬಂಡನ್ನು ಮಾಡಬೇಕೆಂದು ೧೯೮೦-೮೧ರಲ್ಲಿ ನಿರ್ಧಾರ ಮಾಡಿತ್ತು. ನಂತರ ರೈತರು ಮನವಿ ಸಲ್ಲಿಸಿ ಇಷ್ಟು ಉದ್ದ ಮಾತ್ರ ಮಾಡಿದರೆ ಸಾಲುವುದಿಲ್ಲ, ಈ ಉದ್ದದ ವಿಸ್ತೀರ್ಣವನ್ನು ಇನ್ನೂ ಹೆಚ್ಚು ಮಾಡಬೇಕೆಂದು ಕೇಳಿಕೊಂಡರು. ಆಗ ಅದರ ಉದ್ದವನ್ನು ಹೆಚ್ಚಿಸಿದರೆ ೧೦೬ ಎಕರೆಗೆ ಬದಲಾಗಿ ೨೯೬ ಎಕರೆಗೆ ಲಾಭವಾಗುತ್ತದೆಂದು ಆಲೋಚಿಸಿ ೧೩ ಲಕ್ಷದ ೧೧ ಸಾವಿರ ರೂಪಾಯಿಗಳ ಯೋಜನೆಯನ್ನು ಸಿದ್ಧಪಡಿಸಲಾಯಿತು. ಸಿದ್ಧಪಡಿಸಿರತಕ್ಕ ಯೋಜನೆ ಈಗ ಸರ್ಕಾರದ ಮುಂದಿದೆ. ಆ ಬಗ್ಗೆ ಆದಷ್ಟು ಜಾಗ್ರತೆ ಪರಿಶೀಲನೆ ಮಾಡಿ ಕಾರ್ಯಕ್ರಮ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ.

ಶ್ರೀಮತಿ ಅನಸೂಯ ಗಜಾನನ ಶರ್ಮ -.—ಮಾನ್ಯ ಅಧ್ಯಕ್ಷರೇ, ಇನ್ನೂ ಪರಿಶೀಲನೆ ಮಾಡುವ ಉತ್ತರ ಬರುತ್ತಿದೆ. ಮಾನ್ಯ ಮಂತ್ರಿಗಳಿಂದ ನನಗೆ ಖಚಿತವಾದ ಉತ್ತರಬೇಕು. ಎಷ್ಟೋ ಕಾರ್ಯಕ್ರಮಗಳನ್ನು ಈ ವರ್ಷದ ಬಜ್ಜೆಟ್ಟಿನಲ್ಲಿ ಸೇರಿಸುತ್ತೇವೆಂದು ಹೇಳಿದ್ದರೂ ಹಣವನ್ನೂ ಮಂಜೂರ್ಮಾಡಿರುವುದಿಲ್ಲ ಇವತ್ತಿನ ದಿವಸ ಇದು ಬಡ ರೈತರ ಜೀವನ ಮರಣದ ಪ್ರಶ್ನೆಯಾಗಿದೆ. ಆದುದರಿಂದ, ನದಿ ಕೊರೆತಕ್ಕೆ ಕಟ್ಟೆ ಕಟ್ಟುವುದಕ್ಕೆ ೧೯೮೨-೮೩ನೇ ಸಾಲಿನ ಬಡ್ಜೆಟ್ಟಿನಲ್ಲಿ ಖಂಡಿತ ಪ್ರಾವಿಷನ್ ಮಾಡಿ ಕೆಲಸ ತೆಗೆದು ಕೊಳ್ಳುತ್ತೇವೆಂದು ಅವರು ಹೇಳಬೇಕು

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಆ ಬಗ್ಗೆ ನಾನು ಪ್ರಯತ್ನ ಮಾಡುತ್ತೇನೆ. ಆದರೆ ಈ ಸಂದರ್ಭದಲ್ಲಿ ಭರವಸೆ ಕೊಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಬಡ್ಜೆಟ್ಟಿನಲ್ಲಿ ಇನ್‌ಕ್ಲೂಡ್ ಆದಮೇಲೆ ಈ ವರ್ಷ ಕಾರ್ಯಗತ ಮಾಡುತ್ತೇವೆಂದು ಹೇಳಿ. ನಿಮಗೆ ಗೊತ್ತಿದ್ದ ಹಾಗೆ ಕಾರವಾರ ಜಿಲ್ಲೆಯಲ್ಲಿ ಯಾವ ರೀತಿ ಮಳೆಯಾಗುತ್ತದೆಂಬುದನ್ನು ಹೇಳಬೇಕಾಗಿಲ್ಲ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—೧೩ ಲಕ್ಷ ರೂಪಾಯಿಗಳ ಕೆಲಸ ಮಾಡಬೇಕೆಂದು ಆದಮೇಲೆ ನಾವು ಕೂಡ ಮಾನ್ಯ ಹಣಕಾಸಿನ ಮಂತ್ರಿಗಳೊಡನೆ ಚರ್ಚೆ ಮಾಡಿ ಫೈಷ್ ವರ್ಕ್ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—೧೯೭೯-೮೦ರಲ್ಲಿ ಪರಿಶೀಲನೆಯಲ್ಲಿದೆ ಎಂದು ಹೇಳಿ ೨ ವರ್ಷವಾದರೂ ಮಾನ್ಯ ಹಣಕಾಸಿನ ಮಂತ್ರಿಗಳೊಡನೆ ಮಾತನಾಡುವುದಕ್ಕೆ ಆಗಲಿಲ್ಲವೆ ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರು ಎತ್ತಿರತಕ್ಕ ವಿಷಯವನ್ನು ನಾನು ಕಣ್ಣಾರೆ ನೋಡಿದ್ದೇನೆ, ಮತ್ತು ಸಚಿವನಾಗಿದ್ದಾಗಲೂ ಪ್ರಸ್ತಾಪ ಮಾಡಿದ್ದೇನೆ. ಈಗ ತಾವು ಅದನ್ನು ವಿಚಾರ ಮಾಡಿ ಆದಷ್ಟು ಜಾಗ್ರತೆ ಕೆಲಸವನ್ನು ತೆಗೆದುಕೊಳ್ಳಬೇಕಾಗುತ್ತದೆ. ಅದರಿಂದ ಬಹಳ ಜನರಿಗೆ ತೊಂದರೆ ಇದೆ. ತಡಮಾಡುವುದರಿಂದ ಹಣದ ಖರ್ಚು ಜಾಸ್ತಿಯಾಗುವ ಸಂದರ್ಭ ಇದೆ ಅದನ್ನು ಜಾಗ್ರತೆ ಮಾಡಿಸಿಕೊಡುತ್ತೇವೆಂದು ಹೇಳಿ, ಅಂಥದ್ದನ್ನೆಲ್ಲ ಜಾಗ್ರತೆ ಮಾಡಬೇಕು. ಮಾಡದಿದ್ದರೆ ಹೇಗಾಗುತ್ತದೆ?

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರುಶೇಖರ್.—ಸಚಿವರಾಗಿ ನೋಡಿದ ಮೇಲೆ ಇವರು ಏನು ಮಾಡಿದರು ?

ಶ್ರೀ ಎಸ್. ಬಂಗಾರಪ್ಪ.—ತಮಗೆ ಅರ್ಥವಾಗುವುದಿಲ್ಲ, ಕುಳಿತುಕೊಳ್ಳಿ. ಆಮೇಲೆ ಬೇಕಾದರೆ ಹೇಳೋಣ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಆದಷ್ಟು ಜಾಗ್ರತೆ ಮಾಡಿಸಿಕೊಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

MR. SPEAKER.—Questions are over.

QUESTIONS FOR ANSWERS ON THE DAY
(but not taken up)

Upgradation of Hospital at Mahalingpur in Mudhol Taluk of Bijapur District

1237. SRI J.K. KALE (Mudhol).-Will the Minister for Health and Family Welfare be pleased to state:-

(a) whether there is any proposal before the Government to upgrade the present hospital into a 50 bed hospital at Mahalingapur, Mudhol taluk during the current year?

(b) if so, when the hospital is going to be upgraded into 50 bedded Hospital;

(c) whether it is a fact that this issue has been pending with the Government for the last 4 years and if so, the reasons therefor ;

(d) the step taken by Government to expedite this issue?

SRI A. K. ABDUL SAMAD (Minister for Health and Family Welfare) --

(a) A proposal for upgradation of the present hospital at Mahalingapur into a 30 bed hospital is under consideration.

(b) Not at present.

(c) & (d) No contribution from the public has been received so far. As such this issue has been pending consideration. After an estimate for the 30 bed general hospital is prepared, in the light of an assurance regarding popular contribution of Rs. 1 lakh the sanction of this estimate would be considered.